**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ**

CC No.:-4177/2023

C.W.:-1

P.W.:-1

| | |
|---|---|
| ಸಾಕ್ಷಿದಾರನ ಹೆಸರು | ಕಲ್ಲಪ್ಪ ನಾಯಿಕ |
| ತಂದೆಯ ಹೆಸರು | ಮಹಾದೇವ |
| ವಯಸ್ಸು | 50 ವರ್ಷ |
| ಕೆಲಸ | ಒಕ್ಕಲುತನ |
| ವಾಸ | ನನದಿವಾಡಿ |

ಸಾಕ್ಷಿಗೆ ಈ ದಿನ ದಿಃ 01-04-2026 ರಂದು ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭೀಯೋಜಕರಿಂದಃ**

ಚಾಸಾ 9,11 ರಿಂದ 13 ನನಗೆ ಪರಿಚಯ. ಚಾಸಾ 10 ನನ್ನ ತಮ್ಮ. ಆರೋಪಿತರು ನನಗೆ ಸಂಬಂಧಿಕರು ಆಗಬೇಕು.

ನಮ್ಮ ಊರಿನ ಸ್ಮಶಾನಕ್ಕೆ ಹೋಗಲು ಆರೋಪಿತರ ಜಮೀನಿನಲ್ಲಿ ಕಾಲು ದಾರಿ ಇತ್ತು ಅದನ್ನು ಆರೋಪಿತರು ಬಂದ ಮಾಡಿರುತ್ತಾರೆ ಆದ ಕಾರಣ ಆರೋಪಿತರ ಮತ್ತು ನಮ್ಮ ಮಧ್ಯೆ ವೈಮನಸ್ಸು ಆಗಿರುತ್ತದೆ. ಹೀಗಿರಲಾಗಿ ದಿಃ18-03-2023 ರಂದು ಚಾಸಾ 10 ರವರು ಬೆಳಗ್ಗೆ 09.40 ದಿಂದ 10.40 ರ ಸುಮಾರಿಗೆ ಯಕ್ಸಂಬಾಕ್ಕೆ ರಾಶಿ ಮಶೀನನ್ನು ನೋಡಲು ಹೋಗುತ್ತಿರುವಾಗ ನಾನು ನಮ್ಮ ಹೋಲದಲ್ಲಿ ಕೆಲಸ ಮಾಡುತ್ತಿದ್ದಾಗ ಚಾಸಾ 9 ರವರು ಬಂದು ನನ್ನ ಮುಂದೆ ನಿನ್ನ ತಮ್ಮನಿಗೆ ಯಕ್ಸಂಬಾ ಚಿಕ್ಕೋಡಿ ರಸ್ತೆಯ ಬಾಳಾಸಾಹೇಬ ವಡ್ಡರ ಇವರ ಜಮೀನಿನ ಹತ್ತಿರ ಆರೋಪಿತೆಲ್ಲರೂ ಹೊಡಿ ಬಡಿ ಮಾಡುತ್ತಿದ್ದಾರೆ ಎಂದು ಹೇಳಿದನು. ಆಗ ನಾನು  ಮತ್ತು ಚಾಸಾ 11 ಸೇರಿಕೊಂಡು ಘಟನಾ ಸ್ಥಳ ಹೋಗಿ ನೋಡಿದಾಗ ಚಾಸಾ 10 ರವರಿಗೆ ತಲೆಯಿಂದ ರಕ್ತ ಬರುತ್ತಿತ್ತು ನಾನು ಚಾಸಾ 10 ರವರಿಗೆ ಎನು ಆಯಿತು ಎಂದು ಕೇಳಿದಾಗ ಆರೋಪಿತರು ಎಲ್ಲರೂ ಹಿಂದಿನಿಂದ ಬಂದು ನನ್ನ

ಮೋಟರ ಸೈಕಲ ನಂಬರ ಕೆ ಎ 23 6881 ಅಡ್ಡ ಗಟ್ಟಿ ಊರಿನಲ್ಲಿ ದಾದಾಗಿರಿ ಮಾಡುತ್ತಿದ್ದಿಯಾ, ಊರಿನಲ್ಲಿ ಲಿಡರ್ ಆಗಿದ್ದಿ, ಮುಂದೆ ಎನಾದರೂ ಮಾಡಿದರೆ ನಿನ್ನ ಜೀವ ಸಹಿತ ಬಿಡುವುದಿಲ್ಲ ಎಂದು ಹೇಳಿ 1 ರಿಂದ 3 ನೇ ಆರೋಪಿತರು ಕೈಯಿಂದ ಹೊಡಿದರು ಮತ್ತು 4 ನೇ ಆರೋಪಿಯು ಚಾಸಾ 10 ರವರ ತಲೆಗೆ ಕಬ್ಬಿಣ ರಾಡ್‌ದಿಂದ ಹೊಡೆದಿರುತ್ತಾನೆ ಎಂದು ಚಾಸಾ 10 ರವರು ಹೇಳಿದರು. ನಂತರ ನಾನು ಮತ್ತು ಚಾಸಾ 11 ರವರು ಸೇರಿ ಚಾಸಾ 10 ರವರಿಗೆ ಮೋಟರ ಸೈಕಲ ಮೇಲೆ ಸದಲಗಾದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅಲ್ಲಿಂದ ಹೆಚ್ಚಿನ ಉಪಚಾರಕ್ಕೆಂದು ನಮ್ಮ ಖಾಸಗಿ ವಾಹನದಲ್ಲಿ ಚಿಕ್ಕೋಡಿ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ. ನಂತರ ನಿಪ್ಪಾಣಿಯ ನಿರ್ಮಲೆ ಆಸ್ಪತ್ರೆಗೆ ದಾಖಲಿಸಿರುತ್ತೇವೆ. ನಂತರ ನಾನು ಪೊಲೀಸ ಠಾಣೆಗೆ ದೂರು ಸಲ್ಲಿಸಿರುತ್ತೇನೆ. ಸಾಕ್ಷಿಯು ದೂರನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ1 ಮತ್ತು ನಿ ಪಿ1ಎ ಎಂದು ಗುರುತಿಸಲಾಯಿತು.

ದೂರು ಸಲ್ಲಿಸಿದ ನಂತರ ಪೊಲೀಸರು ಘಟನಾ ಸ್ಥಳಕ್ಕೆ ಬೇಟಿ ನೀಡಿ ಪಂಚನಾಮೆಯನ್ನು ಮಾಡಿರುತ್ತಾರೆ. ಸದರಿ ಘಟನಾ ಸ್ಥಳವನ್ನು ಚಾಸಾ 2 ಮತ್ತು 3 ರವರ ಸಮಕ್ಷಮ ಬೆಳಗ್ಗೆ 10.00 ದಿಂದ 11.00 ಗಂಟೆ ವರೆಗೆ ನಾನು ಹೇಳಿ ತೋರಿಸಿದ ಸ್ಥಳದಲ್ಲಿ ಪೊಲೀಸರು ಪಂಚನಾಮೆಯನ್ನು ಮಾಡಿರುತ್ತಾರೆ. ಘಟನಾ ಸ್ಥಳದಲ್ಲಿ ತೆಗೆದಿರುವ ಭಾವ ಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ ಪಿ 2 ಎಂದು ಗುರುತಿಸಲಾಯಿತು. ಆ ದಿನ 4 ನೇ ಆರೋಪಿಯು ಚಾಸಾ 10 ರವರಿಗೆ ಹೊಡೆದಿದ್ದ ರಾಡ್‌ನ್ನು ಈ ದಿನ ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ಅದನ್ನು ಮುದ್ದೆ ಮಾಲು 1 ಎಂದು ಗುರುತಿಸಲಾಯಿತು. ಈ ದಿನ ನ್ಯಾಯಾಲಯದಲ್ಲಿ 2 ಮತ್ತು 4 ನೇ ಆರೋಪಿಗೆ ನೋಡಿ ಗುರುತಿಸುತ್ತೇನೆ. 1 ಮತ್ತು 3 ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸದರಿ 1 ಮತ್ತು 3 ನೇ ಆರೋಪಿತರ ಗುರುತಿಸುವಿಕೆಗೆ ಬಗ್ಗೆ ಆರೋಪಿ ಪರ ವಕೀಲರು ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ನಾನು ಪೊಲೀಸರಿಗೆ ಮರು ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ  ಆರೋಪಿತರ ಪರ ಶ್ರೀ ಎಸ್ ಎಸ್ ಡಿ ವಕೀಲರಿಂದಃ**

1)ನಾನು 10 ನೇ ತರಗತಿಯ ವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ನಿ ಪಿ1 ನ್ನು ಪೊಲೀಸರು ಬರೆದಿರುತ್ತಾರೆ. ದಿಃ20.03.2023 ರಂದು ರಾತ್ರಿ 9.00 ಗಂಟೆಗೆ ಬರೆದಿರುತ್ತಾರೆ. ನಿಪಿ1 ಯಾರು ಬೆರಳಚ್ಚು ಮಾಡಿರುತ್ತಾರೆ ಎನ್ನುವುದು ನನಗೆ ಹೇಳಲು ಆಗುವುದಿಲ್ಲ. ನಾನು ಹೇಳಿದಂತೆ ಪೊಲೀಸರು ಕಚ್ಚಾ ಫಿರ್ಯಾದಿ ಬರೆದುಕೊಂಡು ನಂತರ ಬೆರಳಚ್ಚು ಮಾಡಿರುತ್ತಾರೆ. ಕಚ್ಚಾ ಫಿರ್ಯಾದಿಯ ಮೇಲೆ ನನ್ನ ಸಹಿ ಪಡೆದುಕೊಂಡಿರುವುದಿಲ್ಲ. ನಿಪಿ1 ಫಿರ್ಯಾದಿ ನೀಡಿದ ನಂತರ ನಾನು ಮತ್ತೊಮ್ಮೆ ಪೊಲೀಸ ಠಾಣೆಗೆ ಹೋಗಿರುವುದಿಲ್ಲ. ನಿಪಿ1 ಬೆರಳಚ್ಚು ಮಾಡಿದ ನಂತರ ನನಗೆ ಓದಿ ಹೇಳಿರುತ್ತಾರೆ. ಆ ದಿನ ನಾನು ಠಾಣೆಯಲ್ಲಿ ರಾತ್ರಿ 10.00 ಗಂಟೆ ವರೆಗೆ ಇದ್ದೇನು.

2) ದಿಃ18.03.2023 ರಂದು ರಾತ್ರಿ 8.30 ಗಂಟೆಗೆ ನನದಿ ಗ್ರಾಮದಲ್ಲಿ ಆರೋಪಿತರಿಗೆ ಅಡ್ಡ ಗಟ್ಟಿ ರಾಡ್‌ದಿಂದ ಹೊಡೆದಿರುತ್ತೇವೆ ಎಂದು 4 ನೇ ಆರೋಪಿಯು ನಮ್ಮ ವಿರುದ್ಧ ಫಿರ್ಯಾದಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ರೀತಿ ಜಗಳ ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

3) ಅದೇ ದಿನ ಬೆಳಗ್ಗೆ 9.00 ಗಂಟೆಗೆ ಸುರ್ವಣಾ ಮಾರುತಿ ನಾಯಿಕ ಎನ್ನುವವರು ಪ್ರಸ್ತುತ ಪ್ರಕರಣದಲ್ಲಿರುವ ಆರೋಪಿತರು ಕೊಲೆ ಮಾಡುವ ಪ್ರಯತ್ನ ಮಾಡಿರುತ್ತಾರೆ ಎಂದು ಅವರ ವಿರುದ್ಧ ಫಿರ್ಯಾದಿ  ಸಲ್ಲಿಸಿರುತ್ತಾರೆ ಎಂದರೆ ಸರಿ. ನನದಿ ಊರಿನಿಂದ ಬಾಳಾಸಾಹೇಬ ವಡ್ಡರ ರವರ ಜಮೀನು ಒಂದುವರೆ ಕಿ ಮೀ ಅಂತರ ಇರುತ್ತದೆ. ಆ ದಿನ ಆರೋಪಿತರು ಆಸ್ಪತ್ರೆಯಲ್ಲಿ ದಾಖಲೆ ಆಗಿದ್ದರು ಎಂದರೆ ಸರಿಯಲ್ಲ. ಘಟನಾ ಸ್ಥಳದಿಂದ ಸದಲಗಾ ಪೊಲೀಸ ಠಾಣೆ 11 ಕಿ ಮೀ ಅಂತರದಲ್ಲಿ ಇರುತ್ತದೆ. ನಮಗೆ ಓಡಾಡಲು ನಮ್ಮ ಹತ್ತಿರ ವಾಹನ ಇರುತ್ತವೆ ಮತ್ತು ಸಂಪರ್ಕಿಸಲು ಮೊಬೈಲ ಪೋನ ಇರುತ್ತವೆ. ಘಟನೆ ದಿನ ನಾನು ಅಥವಾ ಅಲ್ಲಿ ಇದ್ದ ಜನರು ಪೋನ ಮುಖಾಂತರ ಪೊಲೀಸರಿಗೆ ಮಾಹಿತಿ ನೀಡಿರುವುದಿಲ್ಲ.

4) ಘಟನೆ ಬಗ್ಗೆ  ವೈದ್ಯರಿಗೆ ಮಾಹಿತಿ ನೀಡಿರುತ್ತೇನೆ. ಪೊಲೀಸರು ಸದಲಗಾದ ಆಸ್ಪತ್ರೆ ಬಂದಿರುವುದಿಲ್ಲ ಆದರೆ ಚಿಕ್ಕೋಡಿಯ ಆಸ್ಪತ್ರೆಗೆ ಮದ್ಯಾಹ್ನ ಬಂದಿರುತ್ತಾರೆ. ಯಾವ ದಿನಾಂಕದಂದು ಬಂದಿರುತ್ತಾರೆ ಎಂದು ನನಗೆ ನೆನಪಿಲ್ಲ. ಚಾಸಾ 10 ರವರಿಗೆ ರಾಡ್ ದಿಂದ ಹೊಡೆದಿರುವ ವಿಷಯ ಸದಲಗಾ ವೈದ್ಯರಿಗೆ ನಾನೇ ತಿಳಿಸಿರುತ್ತೇನೆ. ನಾನು ವೈದ್ಯರಿಗೆ ಸದರಿ ವಿಷಯ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಫಿರ್ಯಾದಿ ನೀಡಲು ವಿಳಂಬ ಆಗಿರುವ ಬಗ್ಗೆ

ಕಾರಣವನ್ನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ಚಾಸಾ 10 ರವರ ಜೊತೆ ಅವರ ಹೆಂಡತಿ ಇದ್ದರು.

5) ಸ್ಮಶಾನದ ದಾರಿಯ ಕುರಿತು ಉಪ ವಿಭಾಗಾಧಿಕಾರಿಗಳ ಕಚೇರಿಯಲ್ಲಿ ಪ್ರಕರಣ ದಾಖಲು ಆಗಿತ್ತು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಮ್ಮ ಯಾವುದೇ ಹಕ್ಕು ಇರುವುದಿಲ್ಲ ಎಂದು ಆದೇಶ ಆಗಿರುತ್ತದೆ ಎಂದರೆ ಸರಿ. ಆರೋಪಿತರ ಜಮೀನಿನಲ್ಲಿ ಸ್ಮಶಾನಕ್ಕೆ ಹೋಗಲು ಯಾವುದೇ ಕಾಲು ದಾರಿ ಇರುವುದಿಲ್ಲ ಆದರೂ ಸಹ ಅದನ್ನು ಸೃಷ್ಟಿಸಲು ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6) ದಿಃ18.03.2023 ರಂದು ಬೆಳಗ್ಗೆ 8.00 ಗಂಟೆಗೆ ನಾನು ಹೊಲಕ್ಕೆ ಹೋಗಿರುತ್ತೇನೆ. ನಾನು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 8.30 ಗಂಟೆಗೆ ನಾನು ಊರಲ್ಲಿ ಇದ್ದು ಆರೋಪಿತರಿಗೆ ಹೊಡಿ ಬಡಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೋಗುವಷ್ಟರಲ್ಲಿ ಆರೋಪಿತರು ಸ್ಥಳದಲ್ಲಿ ಇರಲಿಲ್ಲ. ಮುದ್ದೆ ಮಾಲು 1 ಸ್ಥಳದಲ್ಲಿ ಬಿದ್ದಿತ್ತು. ಪಂಚನಾಮೆಯನ್ನು ಮಾಡಲು ಪೊಲೀಸರು ಬಂದಾಗ ನಾನೇ ಮಾಹಿತಿ ನೀಡಿರುತ್ತೇನೆ. ಪಂಚನಾಮೆಯಲ್ಲಿ ಪೊಲೀಸರು ಘಟನಾ ಸ್ಥಳದಿಂದ ಯಾವುದೇ ವಸ್ತುಗಳು ಜಪ್ತಿ ಮಾಡಿರುವುದಿಲ್ಲ ಎಂದು ಬರೆದಿರುತ್ತಾರೆ ಎಂದರೆ ಸರಿ. ಮುದ್ದೆ ಮಾಲು 1 ನಾನು ಮೊದಲನೆ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಯಾವುದೇ ಘಟನೆ ಆಗಿರುವುದಿಲ್ಲ ಆದ್ದರಿಂದ ಸ್ಥಳದಲ್ಲಿ ಯಾವುದೇ ರಾಡ್ ಬಿದ್ದಿರುವುದಿಲ್ಲ ಎಂದರೆ ಸರಿಯಲ್ಲ. ಅದಕ್ಕೆ ಪೊಲೀಸರು ಆ ದಿನ ರಾಡ ಜಪ್ತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

7) ಚಾಸಾ 10 ರವರ ತಲೆಗೆ ಗಾಯ ಆಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 10 ರವರ ತಲೆಯ ಯಾವ ಭಾಗಕ್ಕೆ ಗಾಯ ಆಗಿರುತ್ತದೆ ಎನ್ನುವುದು ಗೊತ್ತಿಲ್ಲ. ಚಾಸಾ 10 ರವರ ಬಟ್ಟೆಗೆ ರಕ್ತ ಹತ್ತಿರುತ್ತದೆ. ಪೊಲೀಸರು ಸದರಿ ಬಟ್ಟೆಗಳು ಜಪ್ತಿ ಮಾಡಿರುವುದಿಲ್ಲ. ಘಟನಾ ಸ್ಥಳ ಸಾರ್ವಜನಿಕ ರಸ್ತೆ ಇದ್ದು ಜನ ಓಡಾಡುತ್ತಾರೆ ಮತ್ತು ಕಾಡಾಪೂರ ಹಾಗೂ ನಾಯಿಕ ರವರ ಮನೆಗಳು ಇರುತ್ತವೆ ಎಂದರೆ ಸರಿ. ಕಾಡಾಪೂರ ರವರು ನಾನು ಘಟನಾ ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಬಂದಿರುತ್ತಾರೆ. ಸದರಿ ಯವರ ಹೆಸರು ಫಿರ್ಯಾದಿಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾನು ಚಾಸಾ 10 ರವರಿಗೆ ಕರೆದುಕೊಂಡು ಹೋದಾಗ ನನ್ನ ಬಟ್ಟೆಗೆ ಯಾವುದೆ ರಕ್ತ ಹತ್ತಿರಲಿಲ್ಲ.

8) ನಮಗೆ ಹಾಗೂ ಆರೋಪಿತರ ಮದ್ಯೆ ವೈಮನಸ್ಸು ಇರುವುದರಿಂದ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿತರು ಚಾಸಾ 10 ರವರಿಗೆ ಯಾವುದೆ ರೀತಿ ಕೈಯಿಂದ ಹೊಡಿ ಬಡಿ ಮಾಡಿರುವುದಿಲ್ಲ ಮತ್ತು 4 ನೇ ಆರೋಪಿಯು ಮುದ್ದೆ ಮಾಲು 1 ರಿಂದ ಚಾಸಾ 10 ರವರಿಗೆ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ಸ್ಮಶಾನಕ್ಕೆ ಹೋಗಲು ದಾರಿ ಸೃಷ್ಟಿಸುವ ಉದ್ದೇಶದಿಂದ ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ